ಅಷ್ಟರಲ್ಲೇ ಜಗಳಕ್ಕೆ ಬ್ರೇಕ್ ಹಾಕಲು ಯತ್ನಿಸಿದಳು ರೇಣು.

ಐದು ನಿಮಿಷ ಆಯಿತು ಬಾತ್‌ರೂಮಿನ ಬಾಗಿಲು ತೆಗೆಯಲು. ಅದಾಗಲೇ ಶೂ ತೊಟ್ಟಿದ್ದ ರೇಣು, ಡೈನಿಂಗ್ ಟೇಬಲ್ ಕುರ್ಚಿಯಲ್ಲಿ ಕೂತು ಬೆರಳು ಬಡಿಯುತ್ತಿದ್ದಳು.

ಟವೆಲ್ ಸುತ್ತಿಕೊಂಡು ಹೊಗೆಯಾಡುವ ಬಿಳಿ ಮೈಯ ಘಮಘಮಿಸುವ ಗಿರೀಶ್ ಹೊರಗೆ ಬಂದ. ಆದರೆ, ಅವನಿಗಾಗಲೇ ಕೋಪ ಮರೆತುಹೋಗಿತ್ತು. ಸಿಳ್ಳೆ ಹಾಕುತ್ತಾ ಚಡ್ಡಿ ಹಾಕಿಕೊಂಡು ಟವೆಲ್ ತೆಗೆದು ತಲೆ ಒರೆಸಿಕೊಳ್ಳುತ್ತಾ 'ಏನ್ ಪ್ರೋಗ್ರಾಮ್ ಇವತ್ತು?' ಅಂತ ಸಹಜ ದನಿಯಲ್ಲಿ ಕೇಳಿದ.

'ಫೌಂಡೇಷನ್‌ಗೆ ಹೋಗ್ತಿದ್ದೀನಿ, ನಿನ್ನೆ ಸೆಕ್ಷನ್ 377 ಬಗ್ಗೆ ಸುಪ್ರೀಂ ಕೋರ್ಟ್ ತೀರ್ಮಾನ ಬಂತಲ್ಲಾ... ಸೆಲೆಬ್ರೇಟ್ ಮಾಡ್ತಿದ್ದೀ... ವಿ...ದ್ದಾರೆ'.

ಕಪ್ಪು ಪ್ಯಾಂಟು ತೊಡುತ್ತಾ ಗಿರೀಶ್ ತುಟಿ ಸೊಟ್ಟಗೆ ಮಾಡಿ 'ಓ... ಇನ್‌ಮೇಲೆ ಸಿಗ್ನಲ್‌ನಲ್ಲಿ ಯಾವ ಹಿಜಡಾನೂ ಭಿಕ್ಷೆ ಬೇಡಲ್ಲಾ ಅಲ್ವಾ?' ಅಂದ.

ಅದು ಅವಳಿಗೆ ಇಷ್ಟ ಆಗಲಿಲ್ಲ. ಆದರೂ ಸಮಾಧಾನವಾಗಿಯೇ 'ಅದಕ್ಕೂ ಸಲಿಂಗರತಿ ಕ್ರೈಮ್ ಅಲ್ಲ ಅನ್ನೋದಕ್ಕೂ ಏನು ಸಂಬಂಧ? ಸೆಕ್ಷನ್ 377 ರದ್ದು ಅಂದ್ರೆ ಇನ್ನು ಮೇಲೆ ಸಲಿಂಗರತಿ ಅಪರಾಧ ಅಲ್ಲ ಅಂತ...' ಅಂದಳು.

'ನನಗೆ ಒಂಬತ್ತು ಗಂಟೆಗೆ ಮೀಟಿಂಗ್ ಇದೆ... ಟ್ರಾಫಿಕ್‌ನಲ್ಲಿ ಹೋಗಕ್ಕೆ ಅರ್ಧ ಗಂಟೆ ಆಗುತ್ತೆ... ಆಗ್ಲೇ ಎಂಟೂವರೆ ಆಗಿಹೋಯ್ತು...' ರೇಣು ಸ್ವಲ್ಪ ಅಸಹನೆಯಲ್ಲಿ ಹೇಳಿದಳು.

'ಐದು ನಿಮಿಷ ತಡ ಆಗಿಹೋದ್ರೆ ಏನು ಆಗಲ್ಲ... ಸುಪ್ರೀಂ ಕೋರ್ಟ್ ಏನೂ ಮನಸ್ಸು ಬದಲಾಯಿಸಲ್ಲ... ನಾನೂ ಬೇಗ ರೆಡಿ ಆಗ್ತೀನಿ... ಬೇಕಾದರೆ ಡ್ರಾಪ್ ಮಾಡ್ತೀನಿ'.

'ಬೇಡ... ನೀವಿನ್ನೂ ತಿಂಡಿ ತಿಂದಿಲ್ಲ... ನಿಧಾನವಾಗಿ ತಿಂದು ಹೊರಡಿ, ನಾನು ಹೋಗ್ತೀನಿ'.

ಬಿಳಿ ಶರ್ಟ್ ಹಾಕಿಕೊಂಡು ತಲೆ ಬಾಚಿಕೊಳ್ಳುತ್ತಾ ಗಿರೀಶ್, 'ಅವರು ಮೀಟಿಂಗ್ ಮಾಡ್ಕೋತಾ ಇರ್ತಾರೆ, ನೀನು ಹೋಗಿ ಜಾಯಿನ್ ಆಗು, ಅದಕ್ಯಾಕೆ ಅಷ್ಟು ಒದ್ದಾಡ್ತಿಯಾ?' ಅಂದ.

ಇಬ್ಬರ ನಡುವೆ ಜಗಳಕ್ಕೆ ಯಾವಾಗಲೂ ಅದೇ ಕಾರಣ. 'ಅವರು ಮಾಡ್ಕೋತಾರೆ ನೀನ್ಯಾಕೆ ಒದ್ದಾಡಬೇಕು, ನೀನೇನು ಹಿಜಡಾನಾ ಅಥವಾ ಎಲ್‌ಜಿಬಿಟಿನಾ?' ಅಂತ ಸದಾ ಗಿರೀಶ್ ಅವಳ ಹೋರಾಟದ ಮನಸ್ಸನ್ನು ಚುಚ್ಚುತ್ತಿದ್ದ. ಅವರನ್ನು ಮುಖ್ಯವಾಹಿನಿಗೆ ತರಬೇಕಾದರೆ ನಾವೂ ಹೋರಾಟದಲ್ಲಿ ಭಾಗವಹಿಸಲೇಬೇಕು ಅಂತ ನಂಬಿದ್ದ ರೇಣುಗೆ, ಮೊದಮೊದಲು ಅವನಿಗೆ ಸಮಾಧಾನದ ಉತ್ತರ ಕೊಟ್ಟು ಸಾಕಾಗಿ, ಈಗೆಲ್ಲ ಪ್ರತಿಕ್ರಿಯಿಸುತ್ತಲೇ ಇರಲಿಲ್ಲ.

ಹಟ ಹಿಡಿಯುವ ಬದಲು ರಮಿಸುವುದೇ ಬೆಸ್ಟ್ ಅಂತ ನಿರ್ಧರಿಸಿ ರೇಣು ಅವನನ್ನು ಅಪ್ಪಿ ಸಣ್ಣದಾಗಿ ಮುದ್ದಿಸಿ 'ಹೋಗ್ತೀನಿ ಜಾನಿ, ಸಂಜೆ ಸಿಗ್ತೀನಿ, ಪಿವಿಆರ್‌ನಲ್ಲಿ 2.0ಗೆ ಹೋಗೋಣ' ಅಂದಳು.

ಆದರೆ, ಗಿರೀಶನಿಗೆ ಅಷ್ಟು ಬೇಗನೇ ಸೋಲೊಪ್ಪಿಕೊಳ್ಳಲು ಇಷ್ಟವಿರಲಿಲ್ಲ. 'ಇರು ಎರಡೇ ನಿಮಿಷ, ಒಬ್ಬನಿಗೇ ತಿಂಡಿ ತಿನ್ನಕ್ಕೆ ಬೇಜಾರು' ಅಂದು ತಿನ್ನಲು ಕೂತ. ರೇಣುಗೆ ಈಗ ಕೋಪ ಬಂತು. ಸರಸರನೆ ತಟ್ಟೆ ಇಟ್ಟು, ಇಡ್ಲಿ- ಚಟ್ನಿ ಹಾಕಿ ಅವನ ಮುಂದೆ ಇಟ್ಟು, 'ತಿನ್ನಿ... ನಾನು ಹೋಗಲೇಬೇಕು, ಲೇಟಾಗಿದೆ... ಸಾರಿ... ಬೈ' ಅಂದು ಹೊರಟೇಬಿಟ್ಟಳು.

ಅವನಿಗೆ ಕೋಪ ಬಂತು ಅನ್ನುವುದು ಅವನು ದಢಾರನೇ ಕುರ್ಚಿ ಹಿಂದಕ್ಕೆ ಸರಿಸಿ ತಟ್ಟೆ ತಳ್ಳಿ, ರೂಮಿಗೆ ಹೋಗುವ ಸದ್ದಿನಿಂದ ಅವಳಿಗೆ ಗೊತ್ತಾಯಿತು.

ಏನೂ ಮಾಡಕ್ಕಾಗಲ್ಲ. ಯಾವಾಗ ತಾನು ಹೊರಗೆ ಹೋಗಬೇಕಾದರೂ ಅವನು ಹಾಗೇ ಮಾಡುತ್ತಾನೆ. ಒಟ್ಟಿನಲ್ಲಿ ಅವಳು ಹೊರಗೆ ಯಾವ ಚಟುವಟಿಕೆಯಲ್ಲೂ ಭಾಗವಹಿಸಬಾರದು ಅಷ್ಟೇ. ಬಾಯಲ್ಲಿ ಮಾತ್ರ 'ನಾನೇನು ನಿನ್ನನ್ನ ಕಟ್ಟಿ ಹಾಕಿದ್ದೀನಾ? ಏನು ಬೇಕಾದರೂ ಮಾಡು' ಅಂತ ಹೇಳೋದು. ಯಾವಾಗಲೋ ಒಂದೊಂದು ಸಲ ಬರುವ ಅವಳ ವಾರಗಿತ್ತಿ ಕೂಡ, 'ರೇಣು ಬಿಡಪ್ಪ ತುಂಬಾ ಲಕ್ಕಿ, ಗಿರೀಶೂ ಅವಳಿಗೆ ಫುಲ್ ಫ್ರೀಡಂ ಕೊಟ್ಟಿದ್ದಾರೆ. ಅದರಲ್ಲಿ ಅರ್ಧದಷ್ಟಾದರೂ ಹರಿ ನಂಗೆ ಕೊಟ್ಟಿದ್ದರೇ...' ಅನ್ನದೇ ಇರುತ್ತಿರಲಿಲ್ಲ. ಏನೋ ಮಹಾ ಕಡಿದು ಕಟ್ಟೆ ಹಾಕುವ ಹಾಗೆ. ಅವಳೇನೂ ಹರಿಗೆ ಮಿನಿಟ್ ಟು ಮಿನಿಟ್ ರಿಪೋರ್ಟ್

